**<u>ದಿನಾಂಕಃ 23-07-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.</u>**

**<u>ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀ.ಆರ್.ಎಸ್.ಎಸ್.ವಕೀಲರಿಂದಃ</u>**

1. ನನ್ನ ಲಾರಿಯ ನಂಬರ್ ಕೆಎ 27 ಬಿ 9658 ಆಗಿರುತ್ತದೆ. ಸದರಿ ಲಾರಿಯಲ್ಲಿ ಭತ್ತ ಕಠಾವು ಮಾಡುವ ಮಶಿನ್ ಹೇರಿಕೊಂಡು ಹೋಗುತ್ತಿದ್ದೆವು. ಸದರಿ ಭತ್ತ ಕಠಾವು ಮಾಡುವ ಮಶಿನ್ ಗೆ ಆದ ಹಾನಿಯ ಬಗ್ಗೆ ಪರಿಹಾರಕ್ಕಾಗಿ ಈ ಅರ್ಜಿ ಹಾಕಿರುತ್ತೇನೆ. 3 ನೆ ಎದುರುದಾರರು ನನ್ನ ಲಾರಿಗೆ ವಿಮೆ ಪಾಲಸಿ ನೀಡಿದ ಇನ್ಸುರೆನ್ಸ ಕಂಪನಿಯವರಾಗಿರುತ್ತಾರೆ ಎಂದರೆ ಸರಿ. 3 ನೆ ಎದುರುದಾರರಿಗೆ ನಾನು 3 ನೆ ಪಕ್ಷಗಾರ ಆಗುವುದಿಲ್ಲ ಎಂದರೆ ಸರಿ. ಸದರಿ ಅರ್ಜಿಯನ್ನು ಮೂರನೆ ಎದುರುದಾರರ ವಿರುದ್ಧ ಈ ನ್ಯಾಯಾಲಯದಲ್ಲಿ ಸಲ್ಲಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಕಾನೂನಿನ ಪ್ರಕಾರ ನನ್ನ ಅರ್ಜಿ ಈ ನ್ಯಾಯಾಲಯದ ಮುಂದೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ.

2. ರಸ್ತೆಯ ಬದಿಯಲ್ಲಿ ನನ್ನ ಲಾರಿಯನ್ನು ನಿಲ್ಲಿಸಲಾಗಿತ್ತು . 2 ನೆ ಎದುರುದಾರರ ವಿಮಾ ಕಂಪನಿಗೆ ಒಳಪಟ್ಟ ಲಾರಿ ಸಂಖ್ಯೆ ಕೆಎ 02 ಎ ಜಿ 7153 ನೇದ್ದರ ಚಾಲಕ ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಬಂದು ನಿಲ್ಲಿಸಿದ ನನ್ನ ಲಾರಿಗೆ ಹಿಂದಿನಿಂದ ಡಿಕ್ಕಿ ಪಡಿಸಿರುತ್ತಾರೆ. ಲಾರಿ ಸಂಖ್ಯೆ ಕೆ ಎ 02 ಎ ಜಿ 7153 ನೇದ್ದರ ಚಾಲಕನ ವಿರುದ್ಧ ಪೋಲಿಸರು ಕೇಸ್ ದಾಖಲಿಸಿರುತ್ತಾರೆ ಎಂದರೆ ಸರಿ. ಈ ಅಪಘಾತಕ್ಕೆ ನನ್ನ ಲಾರಿ ಚಾಲಕನ ತಪ್ಪು ಏನು ಇಲ್ಲ ಎಂದರೆ ಸರಿ. ನಾನು ಈ ಅರ್ಜಿಯಲ್ಲಿ ಕೆ ಎ 02 ಎ ಜಿ 7153 ನೇದ್ದರ ವಿಮಾ ಕಂಪನಿಯಿಂದ ಅಂದರೆ 2 ನೆ ಎದುರುದಾರರಿಂದ ಪರಿಹಾರ ಕೇಳಿ ಸಲ್ಲಿಸಿರುತ್ತೇನೆ. 3 ನೆ ಎದುರುದಾರರ ಕಂಪನಿಯಿಂದ ನಾನು ಯಾವುದೆ ಪರಿಹಾರ ಕೇಳಿರುವುದಿಲ್ಲ. ನನ್ನ ಲಾರಿಯ ಚಾಲಕ ಸಹ ಈ ಕೇಸ್ ಗೆ ಅವಶ್ಯಕ ಪಕ್ಷಗಾರ ಆಗಿರುವುದರಿಂದ ಅವರನ್ನು ಪಕ್ಷಗಾರರನ್ನಾಗಿ ಮಾಡದೆ ಈ ಅರ್ಜಿ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನನ್ನ ಲಾರಿಯ ಚಾಲಕನಿಗೆ ಸೂಕ್ತವಾದ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ. ಸೂಕ್ತ ಚಾಲನಾ ಪರವಾನಿಗೆ ಇಲ್ಲದ ಚಾಲಕನಿಗೆ ನನ್ನ ಲಾರಿಯನ್ನು ಕೊಟ್ಟಿದ್ದರಿಂದ ವಿಮಾ ಶರತ್ತುಗಳನ್ನು ಉಲ್ಲಂಘನೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಲಾರಿಯ ಒಳಗೆ ಇದ್ದ ಭತ್ತ ಕಠಾವು ಮಶಿನ್ ಗೆ ಯಾವುದೆ ಹಾನಿಯಾಗಿಲ್ಲ ಎಂದರೆ ಸರಿಯಲ್ಲ.

3. ನಿಪಿ-6 ರಿಂದ 22 ಬಿಲ್ ಗಳು ಸದರಿ ಮಶಿನ್ ಗೆ ಆದ ಹಾನಿಗೆ ಸಂಬಂಧಿಸಿದ ಬಿಲ್ ಗಳು ಅಲ್ಲ ಎಂದರೆ ಸರಿಯಲ್ಲ. ನಿಪಿ-23 ರಿಂದ 42 ಪೋಟೊಗಳು ಹಾನಿಗೆ ಒಳಗಾದ ಮಿಶನ್ ಗೆ ಸಂಬಂಧಿಸಿದ ಪೋಟೊಗಳು ಅಲ್ಲ ಎಂದರೆ ಸರಿಯಲ್ಲ. ವಾಹನ ರಿಪೇರಿಗಾಗಿ

ರೂ.12,00,319/- ಖರ್ಚಾಗಿದೆ ಎಂದು ಹೇಳಿದ್ದು ಅದಕ್ಕೆ ಯಾವುದೆ ಬಿಲ್ ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನವನ್ನು ರಿಪೇರಿಗಾಗಿ ಗ್ಯಾರೇಜ್ ನಲ್ಲಿ ನಿಲ್ಲಿಸಿದ್ದರಿಂದ 8 ಲಕ್ಷ ನಷ್ಟವಾಗಿದೆ ಎಂದು ಹೇಳಿದ್ದು ಆ ಬಗ್ಗೆ ಯಾವುದೆ ದಾಖಲೆ ಕೊಟ್ಟಿಲ್ಲ ಎಂದು ಹೇಳುತ್ತಾರೆ. ಆ ರೀತಿ ಯಾವುದೆ ನಷ್ಟ ಉಂಟಾಗಿಲ್ಲ ಎಂದರೆ ಸರಿಯಲ್ಲ. 3 ನೆ ಎದುರುದಾರರನ್ನು ಈ ಕೇಸ್ ಗೆ ಅನಾವಶ್ಯಕ ಪಾರ್ಟಿಯಾಗಿ ಮಾಡಿರುತ್ತೀರಾ ಎಂದರೆ ಸಾಕ್ಷಿ 2 ನೆ ಎದುರುದಾರರು ನಿಮ್ಮನ್ನು ಪಾರ್ಟಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಅರ್ಜಿ ಯಲ್ಲಿ ನಮೂದಿಸಿದಂತೆ ಪ್ರತಿ ತಿಂಗಳು 3 ಲಕ್ಷ ದುಡಿಯುತ್ತಿದ್ದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಈ ಎಲ್ಲಾ ಕಾರಣಗಳಿಗಾಗಿ 3 ನೆ ಎದುರುದಾರರು ಯಾವುದೆ ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಪರಿಹಾರ ಪಡೆಯಲು ಅರ್ಹರು ಎಂದಾದರೆ ಅದು 2 ನೆ ಎದುರುದಾರರೆ ನನಗೆ ಪರಿಹಾರ ಕೊಡಬೇಕು ಎಂದರೆ ಇಬ್ಬರು ಕೊಡಬೇಕು ಎಂದು ಹೇಳುತ್ತಾರೆ. ನಿಪಿ-49 ರ ಪ್ರಕಾರ ಶಂಕರ್ ಗೌಡ ಬಿ ಪಾಟೀಲ್ ನಮ್ಮ ಲಾರಿಯ ಚಾಲಕ ಆಗಿರುತ್ತಾನೆ. ನಿಪಿ-4 ರ ಪ್ರಕಾರ ನನ್ನ ಲಾರಿ ಮಿಡಿಯಂ ಗೂಡ್ಸ ವಾಹನ ಎಂದರೆ ಸರಿ. ಅದು ವಾಣಿಜ್ಯ ಸಾರಿಗೆ ವಾಹನ ಎಂದರೆ ಸರಿ. ನಿಪಿ-49 ರ ಪ್ರಕಾರ ನಮ್ಮ ಚಾಲಕನಿಗೆ ಎಲ್ ಎಂ ವಿ ಚಾಲನಾ ಪರವಾನಿಗೆ ಇತ್ತು ಎಂದರೆ ಸರಿ. ಎಂ ಜಿ ವಿ ವಾಹನ ಚಲಾಯಿಸಲು ಆತನಿಗೆ ಸೂಕ್ತ ಚಾಲನಾ ಪರವಾನಿಗೆ ಇರಲಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲುಃ 2 ನೆ ಎದುರುದಾರರ ಪರ ವಕೀಲರಿಂದಃ**

1. ಭತ್ತ ಕಠಾವು ವಾಹನದ ಮಾಲಿಕ ಸಹ ನಾನೆ ಆಗಿರುತ್ತೇನೆ. ಸದರಿ ವಾಹನ ಖರೀದಿಯ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಿರುತ್ತೇನೆ. ಅಪಘಾತ ನನ್ನ ಲಾರಿ ಚಾಲಕನ ತಪ್ಪಿನಿಂದ ಆಗಿದೆ ಎಂದು ಪೋಲಿಸರು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಮ್ಮ ಲಾರಿಯ ಚಾಲಕ ರಸ್ತೆಯ ಮೇಲೆ ಯಾವುದೆ ಸೂಚನೆ ನೀಡದೆ ಇಂಡಿಕೇಟರ್ ಹಾಕದೆ ರಸ್ತೆಯಲ್ಲಿ ಓಡಾಡುವ ವಾಹನಗಳಿಗೆ ತೊಂದರೆ ಆಗುವ ರೀತಿ ವಾಹನ ಪಾರ್ಕಿಂಗ್ ಮಾಡಿದ್ದರಿಂದಲೆ ಈ ಅಪಘಾತ ಆಗಿದೆ ಎಂದು ಪೋಲಿಸರು ದೋಷಾರೋಪಣಾ ಪಟ್ಟಿ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತ ನಮ್ಮ ಲಾರಿಯ ಚಾಲಕನ ತಪ್ಪಿನಿಂದಲೆ ಆಗಿರುವುದರಿಂದ 2 ನೆ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.